## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 77 ಇಅಸು 93

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 14-05-1993

## ಸುತ್ತೋಲೆ

ಗ್ರಾಮಾಂತರ ಪ್ರದೇಶ ದಲಿತ ಸಂಘ ಸಂಸ್ಥೆಗಳು ಹಾಗೂ ನಗರ ಪ್ರದೇಶದ ದಲಿತ ಒಕ್ಕೂಟ ಸಮಿತಿಗಳು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ ಹಾಗೂ ಇತರ ಹಿಂದುಳಿದ ವರ್ಗಗಳ ಅಧ್ಯಕ್ಷರು : ಪದಾಧಿಕಾರಿಗಳು, ಪ್ರತ್ಯೇಕ ಮತ್ತು ಸಾಮೂಹಿಕವಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಿಸಿದ ಇಲಾಖಾ ಸಚಿವರಿಗೆ ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಸಲ್ಲಿಸುವ ಮನವಿಗಳನ್ನು ಪರಿಶೀಲಿಸಿ ಅವುಗಳಿಗೆ ಸೂಕ್ತ ಮರು ಉತ್ತರವನ್ನು ಹಿಂಬರಹಗಳ ಮೂಲಕ ಕಳುಹಿಸಿಕೊಡುವ ಸೌಜನ್ಯವನ್ನು ತೋರಬೇಕು ಎಂದು ಆಗಾಗ್ಗೆ ಸರ್ಕಾರ ಸುತ್ತೋಲೆಗಳ ಮೂಲಕ ಸೂಚನೆಗಳನ್ನು ನೀಡುತ್ತಾ ಬಂದಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಇಂತಹ ಮನವಿಗಳು : ಅರ್ಜಿಗಳ ಮೇಲೆ ತುರ್ತು ಕ್ರಮ ತೆಗೆದುಕೊಳ್ಳುವಂತೆ ಮತ್ತು ತೆಗೆದುಕೊಂಡ ಕ್ರಮದ ಬಗ್ಗೆ ಹಿಂಬರಹ ನೀಡುತ್ತಿಲ್ಲವೆಂದು ಸರ್ಕಾರಕ್ಕೆ ದೂರುಗಳು ಬಂದಿವೆ. ಕಾರಣ ಇಂತಹ ಸಂಘ ಸಂಸ್ಥೆಗಳಿಂದ ಬರುವ ಮನವಿಗಳು : ಅರ್ಜಿಗಳನ್ನು ಅತಿ ಶೀಘ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು ಮತ್ತು ತೆಗೆದುಕೊಂಡ ಕ್ರಮದ ಬಗ್ಗೆ ಸಂಬಂಧಪಟ್ಟ ಅರ್ಜಿದಾರರಿಗೆ : ಸಂಘ ಸಂಸ್ಥೆಗಳಿಗೆ ಹಿಂಬರಹದ ಮೂಲಕ ಉತ್ತರವನ್ನು ಜರೂರಾಗಿ ಕಳುಹಿಸುವಂತೆ ಈ ಮೂಲಕ ಕೋರಲಾಗಿದೆ.

(ಜಾ. ಕೃ. ಲಿನ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

ಗೆ:

ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲು

ಪ್ರತಿಗಳು:

1) ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು
2) ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರುಗಳು

ಜಿಲ್ಲಾಧಿಕಾರಿಗಳು,
ಹಾಸನ ಜಿಲ್ಲೆ, ಹಾಸನ.
17/6/93